# ಏಕೆ ಗೆತ್ಸೇಮನೆಯಲ್ಲಿ ಯಾತನೆ?

**(ಮಾರ್ಕ 14:38-46)**

**"ಶೋಧನೆಗೆ ಒಳಗಾಗದಂತೆ ಎಚ್ಚರವಿದ್ದು ಪ್ರಾರ್ಥಿಸಿರಿ" ಮತ್ತಾ 26:41**

ತಮ್ಮ ಮರಣವನ್ನು ಸ್ಮರಿಸಿಕೊಳ್ಳುವ ಪಾಸ್ಕಭೋಜನವು ಮುಗಿದ ನಂತರ, ಯೇಸು ಮತ್ತು ಅವರ ಶಿಷ್ಯರು ಸ್ತೋತ್ರಗೀತೆ ಹಾಡಿ ಪಟ್ಟಣದಿಂದ ಹೊರಗೆ ಎದುರಾಗಿ ಇರುವ ಆಲೀವ್ ಗುಡ್ಡಕ್ಕೆ ಹೋದರು. ಸುಮಾರು ಒಂದು ಮೈಲು ದೂರಕ್ಕೆ ಹೋದರು. ಗೆತ್ಸೇಮನೆಗೆ ಹೋಗುವ ದಾರಿಯಲ್ಲಿ ಶಿಷ್ಯರಿಗೆ ಅನೇಕ ಮುಖ್ಯವಾದ ಪಾಠಗಳನ್ನು ಕೊಡಲಾಯಿತು. ಇವುಗಳು ಯೋಹಾನ್ನನ ಸುವಾರ್ತೆ 15 ರಿಂದ 17 ರ ವರೆಗಿನ ಅಧ್ಯಾಯಗಳಲ್ಲಿ ಬರೆಯಲಾಗಿದೆ.

ಗೆತ್ಸೇಮನೆ ಎಂಬ ವಾಕ್ಯದ ಅರ್ಥ ಎಣ್ಣೇ ಮಾಧ್ಯಮ (Oil-Press) ಎಂಬುದು. ಇದು ಅತ್ಯಂತ ಅರ್ಥವುಳ್ಳ ಹೆಸರಾಗಿದೆ. ಯೂದರು ಆಲೀವ್ ಹಣ್ಣುಗಳನ್ನು ಆಹಾರಕ್ಕಾಗಿಯೂ, ಬೆಳಕಿಗಾಗಿಯೂ ಬಳಸಿಕೊಂಡರು ಎಂಬುದನ್ನು ನಾವು ನೆನಪಿಸಿಕೊಳ್ಳಲು ಮತ್ತು ಯೇಸುವು ಲೋಕಕ್ಕೆ ಆಹಾರ ದಯಪಾಲಿಸುವವರು ಮತ್ತು ಬೆಳಕು ಕೊಡುವವರು ಎಂಬುದನ್ನು ನಾವು ನೆನಪಿಸಿಕೊಳ್ಳಲು, ಯೇಸುವಿನ ಆತ್ಮವನ್ನೂ ಜಜ್ಜಿದ ಅವರ ಶೋಧನೆಗಳ ಅನುಭವಗಳನ್ನೂ, ಎಣ್ಣೆಗಾಗಿ ಆಲೀವ್ ಹಣ್ಣುಗಳನ್ನು ಜಜ್ಜಿ ತೆಗೆಯುವ ತೋಟದಲ್ಲಿ ಅವರು ಹೊಂದಿರುವುದು ವಿಶೇಷವಾದ ರೀತಿಯಲ್ಲಿ ಹೋಲಿಕೆಯಾಗಿ ಕಾಣಲ್ಪಡುತ್ತದೆ ಎಂಬುದನ್ನು ನಾವು ಕಾಣುತ್ತೇವೆ.

ಗೆತ್ಸೇಮನೆ ಎಂಬುದು ಹೂವಿನ ತೋಟವಾಗಿರದೆ ಆಲೀವ್ ಮರಗಳ ತೋಟವಾಗಿತ್ತು. ಈ ಸ್ಥಳವೆಂದು ಅನುಮಾನಿಸಲ್ಪಡುವಂತಹ ಸ್ಥಳವು ಇಂದಿಗೂ ಜಾಗ್ರತೆಯಿಂದ ಕಾದುಕೊಂಡು ಬರಲಾಗಿದೆ ಮತ್ತು ಫ್ರಾಂಕಿಸ್ಕಾನ್ ಸನ್ಯಾಸಿಗಳಿಂದ ಕಾದುಕೊಂಡು ಬರಲಾಗಿದೆ. ಈ ತೋಟದಲ್ಲಿ ತುಂಬಾ ಹಳೆಯದಾದ ಕೆಲವು ಆಲೀವ್ ಮರಗಳು, ಮತ್ತು ತುಂಬಾ ಹಳೆಯದಾದ ಓಕ್ ಮರವೊಂದು ಕಾಣಲ್ಪಡುತ್ತದೆ. ಈ ತೋಟವು ಯೇಸುವಿನ ಸ್ನೇಹಿತರಾದ ಕೆಲವರಿಗೆ ಸ್ವಂತವಾಗಿದೆ ಎಂದು ಹೇಳಲಾಗುತ್ತಿದೆ. ಯೇಸು ಸೆರೆಹಿಡಿಯಲ್ಪಟ್ಟಾಗ ಉಂಟಾದ ಶಬ್ಧದ ಕಾರಣದಿಂದ ಎದ್ದು ಹೊದಿಕೆಯಿಂದ ತನ್ನನ್ನು ಸುತ್ತಿಕೊಂಡು ಬಂದ ಯುವಕ, ಮಾರ್ಕನ ಸುವಾರ್ತೆಯ ಬರಹಗಾರನಾದ ಜಾನ್ ಮಾರ್ಕನು ಎಂದೂ ಹೆಸರಿಸಲಾಗಿದೆ (ಮಾರ್ಕ 14:51,52)

**ಎಚ್ಚರಿಕೆಯ ಮಾತುಗಳು**

ಗೆತ್ಸೇಮನೆಗೆ ಹೋಗುವ ದಾರಿಯಲ್ಲಿ ತಾವು ಮಹಾ ಉಪದ್ರವದ ಸಂಧರ್ಬದಲ್ಲಿ ಪ್ರವೇಶಿಸುತ್ತಿದ್ದೇವೆ ಎಂದು ಯೇಸು ತಮ್ಮ ಶಿಷ್ಯರಿಗೆ ತಿಳಿಸಲು ಮುಂದಾದರು. ಅವರು, "ಕುರುಬನನ್ನು ಹೊಡೆಯುವೆನು, ಕುರಿಗಳು ಚದುರುವವು" ಎಂಬುವ ಪ್ರವಾದನೆಯನ್ನು ಅವರಿಗೆ ಸೂಚಿಸಿದರು (ಜಕ 13:7). ಈ ಕಾರಣದಿಂದ ಅವರೆಲ್ಲರೂ ದಣಿದುಹೋಗುವರು, ಎಡವುವರು, ದು:ಖಿತರಾಗುವರು ಎಂದು ಸ್ಪಷ್ಟವಾಗಿ ತಿಳಿಸಿದರು. ಅವರು ಎದುರು ನೋಡದಂತ ಕಾರ್ಯಗಳು ಸಂಭವಿಸುತ್ತವೆ ಎಂದು ತಿಳಿಸಿದರು.

ಕರ್ತರಿಗಾಗಿ ತನ್ನ ಭಕ್ತಿಯಲ್ಲಿ ಪೂರ್ಣ ನಂಬಿಕೆಯುಳ್ಳವನಾದ ಪೇತ್ರನು ಇದನ್ನು ನಿರಾಕರಿಸಿದನು ಮತ್ತು ಇದು ಒಂದುವೇಳೆ ಮತ್ತೊಬ್ಬರ ವಿಷಯದಲ್ಲಿ ನಿಜವಾದರೂ, ತನ್ನ ವಿಷಯದಲ್ಲಿ ಹಾಗೆ ಆಗುವುದಿಲ್ಲ ಎಂತಲೂ, ಬೋಧಕರನ್ನು ನಿರಾಕರಿಸುವ ಬದಲು

ಅವರೊಂದಿಗೆ ಸಾಯುವುದಕ್ಕೂ ತಾನು ಸಿದ್ಧನಾಗಿರುವೆ ಎಂದೂ ಹೇಳಿದನು. ಪೇತ್ರನು ಮಹಾ ಅಪಾಯಗಳಲ್ಲಿ ಕಾಣಿಸಿಕೊಳ್ಳುವನೆಂದು ತಿಳಿದು ಸಂಕಟಪಡುವವರಾಗಿದ್ದರು. ಪೇತ್ರನು ತನ್ನ ಶರೀರದಲ್ಲಿ ಅತ್ಯಂತ ನಂಬಿಕೆಯುಳ್ಳವನಾಗಿಯೂ, ದೇವರನ್ನು ಕಣ್ಣೆತ್ತಿ ನೋಡದವನಾಗಿಯೂ, ಶೋಧನೆಗೆ ಎದುರಾಗಿ ಪ್ರಾರ್ಥಿಸುವುದರಲ್ಲಿ ಎಚ್ಚರಿಕೆಯಿಲ್ಲದವನಾಗಿಯೂ ಕಾಣಲ್ಪಟ್ಟನು. ಯೇಸು ಹೇಳಿದ್ದನ್ನು ನಿರಾಕರಿಸಿ ಉತ್ತರಿಸುವ ರೀತಿಯಲ್ಲಿ ಶಿಷ್ಯರೆಲ್ಲರೂ ಮಾತನಾಡಿಕೊಳ್ಳುವವರಾದರು. ಅವರು ತಮ್ಮನ್ನು ಸತ್ಯವಂತರೆಂಬುದಾಗಿಯೂ ಸಾಯುವದಕ್ಕೆ ಸಿದ್ದರೆಂಬುದಾಗಿಯೂ ತಮ್ಮನ್ನು ತೋರಿಸಿಕೊಂಡರು. ಅವರು ತಮ್ಮ ಮೇಲೆ ಎಷ್ಟು ಕಷ್ಟಕರವಾದ ಶೋಧನೆಗಳು ಬರಲಿವೆ ಎಂಬುದನ್ನು ಅರಿಯದವರಾಗಿದ್ದರು!

ಇದು ಇಂದಿಗೂ ಎಂದೆಂದಿಗೂ ನಿಶ್ಚಯವಾಗಿ ಯೇಸುವಿನ ಹಿಂಬಾಲಕರೆಲ್ಲರಿಗೂ ನಿಧರ್ಶನಗಳಾಗಿವೆ. ನಮ್ಮ ಕಡೆಯ ಉಸಿರಿನವರೆಗೂ, ಕರ್ತನ ಉದ್ಧೇಶಗಳಿಗೆ ನ್ಯಾಯವಾಗಿಯೂ/ಸತ್ಯವಾಗಿಯೂ ಪೂರ್ಣ ನಿಶ್ಚಯದಿಂದ ಕಾಣಲ್ಪಡಬೇಕು ಎಂಬುದು ಸರಿಯೇ; ಇಂತಹ ನಿಶ್ಚಯ ಎಂಬುದು ಜೆಯಿಸುವುದಕ್ಕೆ ತುಂಬಾ ಅವಶ್ಯಕವೇ. ಅನೇಕರಿಂದ ಮಾಡಲ್ಪಡುವ ತಪ್ಪೆಂದರೆ, ಶೋಧನೆಗಳೂ, ಪರೀಕ್ಷೆಗಳೂ, ಎಷ್ಟು ಕಷ್ಟಕರವಾಗಿ ಮಾರ್ಪಡುತ್ತವೆ ಎಂಬುದನ್ನು ಅರಿತುಕೊಳ್ಳದಿರುವುದೂ, ನಮಗೆ ಅಗತ್ಯವಿರುವಾಗ ಪರಮ ಸಹಾಯದ ಅವಶ್ಯಕತೆಯನ್ನು ಅರಿತುಕೊಳ್ಳದಿರುವುದೇ ಆಗಿದೆ. ಅಪೋಸ್ತಲನು: "ನಾನು ಬಲಹೀನನಾಗಿರುವಾಗಲೇ ಬಲವುಳ್ಳವನಾಗಿದ್ದೇನೆ" ಎಂದು ಬರೆದಿದ್ದಾರೆ. ಹೀಗೆ ಅಪೋಸ್ತಲನು ಸೂಚಿಸಲು ತಾನು ಕರ್ತರಿಗೆ ಪೂರ್ಣ ವಿಧೇಯನಾಗಿರುವ ಅದೇ ವೇಳೆಯಲ್ಲಿ ತಾನು ತನ್ನ ಸ್ವಂತ ಬಲಹೀನತೆಗಳನ್ನೂ, ನಿರ್ಲಯವಸ್ಥೆಗಳನ್ನೂ ಅರಿತುಕೊಳ್ಳುವುದಾಗಿಯೂ, ಆದರೆ ಪರಮ ಸಹಾಯವನ್ನೇ ವಿಶೇಷವಾಗಿ ಬಯಸಿ, ತಾನು ಬಲವುಳ್ಳವನಾಗಿ ಕಾಣಿಸಲ್ಪಡುವದಾಗಿ, ತಾನು ಎಚ್ಚರಿಕೆಯಿಂದಿದ್ದು ಪ್ರಾರ್ಥಿಸುವಾಗ, ಶೋಧನೆಗೆ ವಿರುದ್ಧ ಮುನ್ನೆಚ್ಚರಿಕೆಗೊಳ್ಳುವೆನೆಂದೂ ಹೇಳುತ್ತಾರೆ.

ನಿಸ್ಸಂದೇಹವಾಗಿ ಈ ಯುಗದ ಅಂತ್ಯದಲ್ಲಿ, ಈ ಸುವಾರ್ತೆ ಯುಗದ ಸಂಪೂರ್ಣ ದಿನಗಳಲ್ಲಿ, ಕ್ರಿಸ್ತನ ಸಭೆಗೆ ಗೆತ್ಸೇಮನೆ ಅನುಭವಗಳು ಸಾಗಿ ಬರುತ್ತವೆ. ಈ ಶೋಧನೆಗಳಲ್ಲೂ ಪರೀಕ್ಷೆಗಳಲ್ಲೂ ನೆಲೆನಿಂತು ಜೆಯಹೊಂದಿದವರಾಗಿ ಬರುವವರರಿಗೆ ಕರ್ತನಿಂದ ವಿಶ್ವಾಸ ಮತ್ತು ನಂಬಿಕೆಯೇ ಬಲವುಳ್ಳದ್ದಾಗಿ ಕಾಣಲ್ಪಡುತ್ತದೆ. ಇವರು ಶೋಧನೆಗೆ ಒಳಪಡದಂತೆ ಎಚ್ಚರಿಕೆಯಿಂದ ಪ್ರಾರ್ಥಿಸುವವರಾಗಿ ಇರುವರು ಮತ್ತು ಹೀಗೆ ಅವುಗಳಿಂದ ಎದುರಾಗಿ ಕಾಪಡಲ್ಪಟ್ಟಿರುವರು. ನಮ್ಮ ಕರ್ತರು ಪೇತ್ರನನ್ನೂ, ಬೇರೆ ಅಪೋಸ್ತಲರನ್ನೂ ಅವರಿಗೆ ಬರಲಿರುವ ಶೋಧನೆಗಳನ್ನು ಕುರಿತು ಮುನ್ನೆಚ್ಚರಿಸಿದಂತೆಯೇ, ನಮಗೆ ಸಮೀಪವಾಗಿ ಕಾಣಲ್ಪಡುವ ಅತೀ ಸಂಕಟವಾದ ಪರೀಕ್ಷೆಗಳನ್ನು ಕುರಿತು ನಮ್ಮನ್ನೂ ಮುನ್ನೆಚ್ಚರಿಸುತ್ತಾರೆ. ಈ ಪಾಠದಲ್ಲಿ ತಿಳಿಸಿದ ಅಪೋಸ್ತಲರ ಅನುಭವಗಳಿಂದ ನಾವು ಪ್ರಯೋಜನವನ್ನು ಪಡೆಯೋಣ.

**ಮರಣಕ್ಕೆ ಸಮನಾದ ದು:ಖ**

ತೋಟಕ್ಕೆ ಬಂದು ಸೇರಿದಾಗ ಯೇಸು ಎಂಟು ಮಂದಿ ಅಪೋಸ್ತಲರರನ್ನು ಬಾಗಿಲಲ್ಲೇ ನಿಲ್ಲಿಸಿ, ಇನ್ನು ಸ್ವಲ್ಪ ದೂರದಲ್ಲಿ ನೆರಳಿನೊಳಗೆ ಪೇತ್ರನೊಡನೆಯೂ, ಯಾಕೋಬನೊಡನೆಯೂ, ಯೋಹಾನನೊಡನೆಯೂ ಹೋದರು. ಎಲ್ಲರೂ ಎಚ್ಚರಿಕೆಯಾಗಿರಬೇಕು, ಕಾವಲು ಕಾಯಬೇಕು ಮುಂದೆ ಯಾವುದೋ ಒಂದು ಘಟನೆ ನಡೆಯಲಿದೆ. ಯೇಸು ಅದನ್ನು ತಿಳಿದುಕೊಂಡಿದ್ದರು ಆದರೆ ಹೀಗೆ ಯಾವುದೂ ನಡೆಯುವುದಿಲ್ಲ ಎಂದೇ ಅಪೋಸ್ತಲರಿಗೆ ತೋಚಿತು. ಬೋಧಕರ ಮೇಲೆ ಅವರಿಗೆ

ಕರುಣೆ ಇದ್ದಾಗಲೂ ಮೋಸವಾದ ಸಂಧರ್ಬಗಳು ಬರುತ್ತವೆಂದು ಅವರು ಎದುರುನೋಡುವುದನ್ನು ಅವರಿಂದ ಗ್ರಹಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಮಧ್ಯರಾತ್ರಿಯಾಗಿತ್ತು ಅವರು ಆ ವೇಳೆಗೆ ಮಲಗುವ ಅಭ್ಯಾಸವುಳ್ಳವರಾಗಿ ಕಾಣಲ್ಪಟ್ಟರು. ಅಂದಿನ ಸಂಜೆ ಉಂಟಾಗಿದ್ದ ಒತ್ತಡ ಮತ್ತು ಬೋಧಕರು ಕೊಟ್ಟ ಬಲವಾದ ಪಾಠಗಳು ಅವರಿಗೆ ಅರೆನಿದ್ದೆಯನ್ನು ಏರ್ಪಡಿಸಿತ್ತು. ಅವರು ಎಚ್ಚರದಿಂದಿದ್ದು ಪ್ರಾರ್ಥಿಸುವ ಬದಲಾಗಿ ನಿದ್ರಿಸಿದರು. ಬೋಧಕರಿಗೆ ಹತ್ತಿರವಾಗಿದ್ದ ಮೂವರೂ ಸಹ ನಿದ್ರಿಸುವವರಾದರು.

ತಂದೆಯೊಡನೆ ಏಕಾಂಗಿಯಾಗಿ ಸಂಭಾಷಿಸಲು ಬಯಸಿದವರಾಗಿ ಯೇಸು ಕಲ್ಲೆಸೆಯುವಷ್ಟು ದೂರ ಹೋಗಿ ಕತ್ತಲೆಯೊಳಗೆ ಮರೆಯಾದರು. ಅವರ ಮೇಲೆ ಬಂದ ಪಾಡುಗಳ ನಿಮಿತ್ತವಾಗಿ ಅವರು ಆ ಸಮಯದಲ್ಲಿ, ಮನುಷ್ಯ ಸಮಾಧಾನ/ಕರುಣೆಯನ್ನು ಕೇಳಿಕೊಂಡಾಗ ತಮಗೆ ಹತ್ತಿರವಾದವರು ಕೂಡ ಎಲ್ಲವನ್ನೂ ಮರೆತುಹೋದವರಂತೆ ನಿದ್ರೆಯಲ್ಲಿರುವುದನ್ನು ಕಂಡರು. "ಜನರಲ್ಲಿ ಒಬ್ಬನೂ ನನ್ನೊಡನೆ ಇರಲಿಲ್ಲ" ಎಂದು ಪ್ರವಾದಿ ಸರಿಯಾಗಿಯೇ ತಿಳಿಸಿದ್ದಾರೆ (ಯೆಶಾ 63:3) ಅವರೊಬ್ಬರೇ ಕಷ್ಟವೆನ್ನುವ ದ್ರಾಕ್ಷಾತೊಟ್ಟಿಯನ್ನು ಏಕಾಂಗಿಯಾಗಿ ತುಳಿದರು.

ತಮ್ಮ ಅಪೋಸ್ತಲರಿಗೆ ಬುದ್ಧಿಮಾತುಗಳನ್ನು ಹೇಳುತ್ತಾ, ಅವರಲ್ಲಿ ಕೆಲವರನ್ನು ತೋಟದ ಬಾಗಿಲಲ್ಲಿ ಬಿಟ್ಟು, ಬೋಧಕರು ತಮ್ಮನ್ನು ಕುರಿತು ಕೆಲವು ಸಮಯದನಂತರ ನಡೆಯಲಿರುವ ಎದಿರು ನೋಡುತ್ತಿರುವಂತಹ ಮುಖ್ಯವಾದ ಸಂಧರ್ಬಗಳನ್ನು ಕುರಿತು ವಿಶೇಷವಾದ ಯೋಚನೆಗಳನ್ನು ಮಾಡುವವರಾದರು. ಅವರು ತಮ್ಮ ಪ್ರೀತಿಯ ಮೂರು ಶಿಷ್ಯರನ್ನು ಬಿಟ್ಟುಹೋಗುವಾಗ ಅವರ ಆತ್ಮದಮೇಲೆ ತ್ವರಿತವಾಗಿ ಬಂದಂತಹ ಒತ್ತಡದ ಭಾರವನ್ನು ಅರಿತವರಾಗಿ "ನನ್ನ ಆತ್ಮವು ಸಾಯುವಷ್ಟು ತತ್ತರಿಸುತ್ತಿದೆ"- ನನ್ನ ಮೇಲೆ ಬರಲಿರುವ ಸಂಕಷ್ಟಗಳು ಬರುವುದಕ್ಕೆ ಮುಂಚೆ ನಾನು ಈಗಲೇ ಮರಣಹೊಂದುವೆನು ಎಂದುಕೊಂಡರು. ಅವರು ಅತ್ಯಂತ ಕಲವಳವುಳ್ಳವರಾಗಿಯೂ, ದಿಗಿಲುಗೊಂಡವರಾಗಿಯೂ ಅವರನ್ನು ಕುರಿತು ನಾವು ಓದುತ್ತೇವೆ. ಇಲ್ಲಿ ಬರೆಯಲಾಗಿರುವ ವಾಕ್ಯಗಳು ಗ್ರೀಕ್ ಭಾಷೆಯಾಗಿದ್ದು ಅತ್ಯಂತ ಕಲವಳಗಳನ್ನೂ ದಿಗಿಲುಗೊಳ್ಳುವಿಕೆಯನ್ನೂ ಕುರಿತದ್ದಾಗಿದ್ದು ಏಕಾಂತವನ್ನೂ, ಸ್ನೇಹಿತರಿಲ್ಲದ ಸ್ಥಿತಿಯನ್ನೂ ತವಕವನ್ನು ವ್ಯಕ್ತಪಡಿಸುವಂತದ್ದಾಗಿದೆ.

ರಕ್ಷಕನ ಮೇಲೆ ತ್ವರಿತವಾಗಿ ಬಂದಂತಹ ಅತ್ಯಂತ ಸಂಕಷ್ಟಗಳು ದುಃಖಗಳು ಅಪನಂಬಿಕೆಯನ್ನು ಏರ್ಪಡಿಸುವ ಭಾವನೆಗಳೂ ಸ್ವಲ್ಪ ಸಮಯಕ್ಕೆ ಮುಂದುವರೆಯಿತು. ಅವರು ತಂದೆಯ ಬಳಿ ಮೂರುಸಾರಿ ಪ್ರಾರ್ಥಿಸಿ, ಈ ವೇಳೆ ನನ್ನನ್ನು ಬಿಟ್ಟು ಹೋಗಲಿ ಎಂದು ಪ್ರಾರ್ಥಿಸಿದರು. ತಮ್ಮ ಹೃದಯವನ್ನು ಜಜ್ಜುತ್ತಿರುವ ಬಹಳಷ್ಟು ಒತ್ತಡಗಳು ಬಿಟ್ಟುಹೋಗಲಿ ಎಂದು ಪ್ರಾರ್ಥಿಸಿದರು. ಬೋಧಕರ ಬೆವರು ರಕ್ತದ ದೊಡ್ಡ ಹನಿಗಳಾಗಿ ಮಾರ್ಪಡುವಷ್ಟು ಮಹಾಸಂಕಟದಲ್ಲಿ ಕಾಣಲ್ಪಟ್ಟರು ಎಂದು ವೈದ್ಯರಾದ ಲೂಕ ಸುವಾರ್ತಿಕನು ತಿಳಿಸಿದ್ದಾನೆ. ರಕ್ತದ ಬೆವರನ್ನು ಕುರಿತು ನಮೂದಿಸಲ್ಪಟ್ಟಿರುವ ಈ ವಾಕ್ಯವು ಹಳೆಯ ಕೆಲವು ಮೂಲ ಪ್ರತಿಗಳಲ್ಲಿ ಇಲ್ಲವಾದರೂ ಈ ರೀತಿಯ ಅನುಭವಗಳು ಮಹಾಸಂಕಟಗಳಲ್ಲಿ ಕಾಣಲ್ಪಡುವ ಬೇರೆ ಕೆಲವರಿಗೆ ಉಂಟಾಗಿದೆ ಎಂಬುದನ್ನು ವೈದ್ಯರು ಒಪ್ಪಿಕೊಳ್ಳುತ್ತಾರೆ.

## **ಬೋಧಕರ ದುಃಖಕ್ಕೆ ಕಾರಣಗಳು**

ಬೋಧಕರು ತಮ್ಮ ಮರಣವನ್ನು ಕುರಿತು ಮುಂಚೆಯೇ ತಿಳಿದುಕೊಂಡವರಾಗಿ ಮತ್ತು ಇದನ್ನು ಕುರಿತು ತಮ್ಮ ಶಿಷ್ಯರಿಗೆ ತಿಳಿಸಿರಲು ಮತ್ತು ತಾನು ಮರಣದಿಂದ ಮೂರನೆಯ ದಿನ ಪುನರುತ್ಥಾನನಾಗುವೆ ಎಂದು ಅವರಿಗೆ ನಿಶ್ಚಯಪಡಿಸಿ ಅವರು ತಮ್ಮ ಮರಣವನ್ನು ಎದಿರು ನೋಡುತ್ತಿರಲು ಆ ಮಹಾಸಂಕಟವನ್ನು ನಾವು ಹೇಗೆ ವಿವರಿಸುವುದು? ಅವರ ಹಿಂಬಾಲಕರಲ್ಲಿ ಕೆಲವರಿಗೆ ಇರದಂತಹ, ಹೌದು ಸಾಮಾನ್ಯ ಜನರಿಗೆ ಇರದಂತಹ ಮರಣವನ್ನು ಕುರಿತ ಅನಿಸಿಕೆ, ರಕ್ಷಕನಿಗೆ ಏಕೆ ಇಷ್ಟು ಬಯವನ್ನು ಏರ್ಪಡಿಸಿತು?

ಶಿಲುಬೆಯಲ್ಲಿ ಹಾಕಲ್ಪಡುವದಕ್ಕೆ ಸರಿಯಾಗಿ (ಅ) ಇದಕ್ಕೂ ಮೇಲಾದ ಅನುಭವಗಳುಳ್ಳ ಮರಣದೊಳಗೆ ನೂರಾರು ರಕ್ತಸಾಕ್ಷಿಗಳು ಹಾದುಹೋಗಿದ್ದಾರೆ. ಇವರು ಯೇಸುವಿಗೆ ಸಮವಾದ ಕ್ರೂರವಾದ ಮರಣದೊಳಗೆ ಹಾದುಹೋಗಲು ಅತ್ಯಂತ ಧೈರ್ಯವನ್ನೂ ದೃಡ ಮನೋಭಾವವನ್ನೂ ತೋರ್ಪಡಿಸಿದ್ದಾರೆ. ಆದರೆ ರಕ್ಷಕರ ಈ ಮನಸ್ಥಿತಿಯನ್ನೂ ಮತ್ತು ಆ ವೇಳೆ (ಅ) ಪಾತ್ರೆಯು ನನ್ನನ್ನು ಬಿಟ್ಟು ಹೋಗುವುದಾದರೆ ಹೋಗಲಿ ಎಂದು ಅತ್ಯಂತ ತವಕದಿಂದ ಅವರು ಪ್ರಾರ್ಥಿಸಿದ್ದನ್ನು ನಾವು ಹೇಗೆ ತೆಗೆದುಕೊಳ್ಳುವುದು?

ಈ ಪ್ರಶ್ನೆಯನ್ನೂ ಇದಕ್ಕೆ ಸರಿಯಾದ ಉತ್ತರವನ್ನೂ ಅರಿತುಕೊಳ್ಳುವುದಕ್ಕೆ ಮನುಕುಲದವರಿಗಿಂತ ಬೋಧಕರು ಎಷ್ಟು ವಿಭಿನ್ನವಾದವರು ಎನ್ನುವುದನ್ನು ನಾವು ತಿಳಿದುಕೊಂಡಿರಬೇಕು. ಲೋಕದವರಿಗೆಲ್ಲಾ ಒಂದು ಮರಣಧಂಡನೆ ತೀರ್ಪು ಕಾಣುತ್ತದೆ. ನಮಗೆ ಯಾವಾಗ ಸಾವು ಸಂಭವಿಸುತ್ತದೆ ಎಂಬುದೇ ಪ್ರಶ್ನೆಯಾಗಿದೆ ಎಂಬುದು ನಾವೆಲ್ಲರೂ ಅರಿತಿದ್ದೇವೆ. ಮರಣದಿಂದ ತಪ್ಪಿಸಿಕೊಳ್ಳುವದಕ್ಕಾಗಿ ಯಾವ ನಂಬಿಕೆಯೂ ನಮಗಿಲ್ಲ. ಅದುಮಾತ್ರವಲ್ಲದೆ ಹತ್ತರಲ್ಲಿ ಒಂಬತ್ತು ಭಾಗದಷ್ಟು ಸತ್ತ ಸ್ಥಿತಿಯಲ್ಲಿ ಇರುವಂತೆ ಕಾಣಪಡುವುದರಿಂದ, ನಮಗಾಗುವ ಅನುಭವಗಳು ಹೆಚ್ಚುಕಡಿಮೆ ಸತ್ತುಹೋದಂತೆಯೇ ಕಾಣಲ್ಪಡುತ್ತದೆ. ಮರಣವನ್ನು ಕುರಿತ ವಿಷಯದಲ್ಲಿ ನಾವು ಹೆಚ್ಚುಕಡಿಮೆ ಬೇಜವಬ್ದಾರಿಯುಳ್ಳವರಾಗಿಯೂ, ಗಮನವಿಲ್ಲದವರಾಗಿಯೂ ಮತ್ತು ಇದಕ್ಕೆ ಅನುಗುಣವಾಗಿ ಕ್ರೂರಿಯಾಗಿ ಕಾಣಲ್ಪಡುತ್ತೇವೆ.

## ನಿಜವಾದ ಆಸಕ್ತಿಯ ಪ್ರದರ್ಶನ

ಮರಣವನ್ನು ಕುರಿತು ಬೇಸರಗೊಳ್ಳದೆ ಭಯವಿಲ್ಲದವರಂತೆ ಯುದ್ಧಸೈನಿಕರು ರಭಸವಾಗಿ ಯುದ್ಧಕ್ಕೆ ನುಗ್ಗುವದುಂಟು ಮತ್ತು ಇದರಂತೆಯೇ ನುಗ್ಗಿಬರುವ ಕುದುರೆಗಳೂ ಉಂಟು. ತಾವು ಮಾಡುತ್ತಿರುವುದೇನೆಂದು ಪೂರ್ಣ ಅರ್ಥಮಾಡಿಕೊಂಡ ಸ್ಥಿತಿಯಲ್ಲಿ ಮರಣವನ್ನು ಕಂಡು ಬಹಳಷ್ಟು ಹೆದರಿಕೊಳ್ಳುವ ಸ್ಥಿತಿಯಲ್ಲೂ ಕರ್ತವ್ಯ ಮತ್ತು ಪ್ರೀತಿಯ ಆಜ್ಞೆಯ ಕಾರಣದಿಂದ ವಿಧೇಯತೆಯ ನಿಮಿತ್ತವಾಗಿ ಮುನ್ನುಗ್ಗುವವರೇ ಮಹಾಧೈರ್ಯವಂತರಾಗಿರುವರು. ಯೇಸು ಈ ರೀತಿಯಾದ ಯುದ್ಧವೀರನೇ. ಬೇರೆಯವರು ಮರಣವೆಂದರೆ ಏನೆಂದು ತಿಳಿದುಕೊಳ್ಳದಿದ್ದರೂ ಅವರು ತಿಳಿದುಕೊಂಡಿದ್ದರು. ಜೀವದ ಮುಖ್ಯತ್ವ ಮತ್ತು ಬೆಲೆಯನ್ನು ಕುರಿತು ಬೇರೊಬ್ಬರು ಅರಿತುಕೊಳ್ಳಲು ಸಾಧ್ಯವಿಲ್ಲದಿದ್ದರೂ ಯೇಸು ಅರಿತುಕೊಂಡವರಾಗಿ ಕಾಣಲ್ಪಟ್ಟರು.

ಯೇಸು ಪರಲೋಕದ ಮಹಿಮೆಯನ್ನು ತೊರೆದವರಾಗಿ, ಆತ್ಮೀಕ ತಳಹದಿಯ ಸ್ವಭಾವವನ್ನು ಬಿಟ್ಟುಬಂದವರಾಗಿ ಮನುಷ್ಯ ಸ್ವಭಾವವನ್ನು ಧರಿಸಿಕೊಂಡರು. ಕಾರಣ ಮನುಷ್ಯನು ಪಾಪ ಮಾಡಿದವನಾಗಿದ್ದಾನೆ ಮತ್ತು ಧೈವೀಕ ಯೋಜನೆಯ ಪ್ರಕಾರ ಯೇಸು ಮನುಷ್ಯನಿಗಾಗಿ ತನ್ನ ಪ್ರಾಣವನ್ನು ಈಡುಬಲಿಯಾಗಿ ಅರ್ಪಿಸಿ, ಅನೀತಿಯುಳ್ಳವರಿಗೆ ಬದಲಾಗಿ ನೀತಿಯುಳ್ಳವರಾಗಿ ಮರಣವನ್ನು ಅನುಭವಿಸಬೇಕಾಯಿತು. ಇದುವೇ ಅವರನ್ನು ಕುರಿತ ದೇವರ ಚಿತ್ತವಾಗಿದೆ. ಈ ಕಾರಣಕ್ಕಾಗಿಯೇ ಅವರು ಈ ಲೋಕಕ್ಕೆ ಬಂದರು

ಎಂದು ಹೇಳಿದರು. ಇದಕ್ಕಾಗಿಯೇ ಅವರು ತಮ್ಮ ಜೀವನವನ್ನೆಲ್ಲಾ ಸಮರ್ಪಿಸಿದರು, ದೇವರ ಚಿತ್ತವನ್ನು ಮಾಡುವುದರಲ್ಲಿಯೂ ಮನುಕುಲಕ್ಕೆ ಸೇವೆಮಾಡುವುದರಲ್ಲಿಯೂ ಅವರು ದಿನವೆಲ್ಲಾ ತಮ್ಮ ಜೀವನವನ್ನು ಸಮರ್ಪಿಸಿಕೊಂಡು ಬಂದರು. ಈಗ ಅದರ ಮಹಾ ಕಟ್ಟಕಡೆಗೆ ಬಂದಿದ್ದಾರೆ.

ಕರ್ತರಿಗೆ ಕೊಟ್ಟಿರುವ ಈ ಕಾರ್ಯದಲ್ಲಿ ಅವರು ವಿಧೇಯವುಳ್ಳವರಾಗಿ ಕಾಣಲ್ಪಟ್ಟರೆ ಅವರು ಧೈವೀಕ ಶಕ್ತಿಯಿಂದ ಮರಣದಿಂದ ಮುಂಚಿನ ಸ್ಥಿತಿಗೂ ಜೀವತಳಹದಿಗೂ ಮೇಲಾದ ಸ್ಥಿತಿಗೂ ಜೀವದಿಂದೆಬ್ಬಿಸುವೆನು ಎಂದು ಪರಮ ತಂದೆ ಪ್ರಮಾಣಮಾಡಿದ್ದರು. ಈ ವಿಷದಲ್ಲಿ ತಂದೆಯ ಸತ್ಯವನ್ನು ಕುರಿತು ತಂದೆಯ ಶಕ್ತಿಯನ್ನು ಕುರಿತು ಯೇಸು ಜಯಗಳಿಸಲಿಲ್ಲ. ಆದರೂ ತಂದೆಯ ವಾಗ್ದಾನ ಮತ್ತು ಏರ್ಪಾಡು ನಿಭಂದಗೆ ಅನುಗುಣವಾಗಿಯೇ ಇದ್ದವು. ನಮ್ಮ ಕರ್ತರು ವಿಧೇಯವುಳ್ಳವರಾಗಿ ಕಂಡಾಗ ಮಾತ್ರ ಉನ್ನತ ಜೀವಕ್ಕಾಗಿ ಪುನರುತ್ಥಾನವನ್ನು ಹೊಂದಿಕೊಳ್ಳಲು ಸಾಧ್ಯ. ಯಾವುದಾದರೊಂದು ದೊಡ್ಡ ಅಥವಾ ಸಣ್ಣ ಪಾಪದಲ್ಲಿ ಭಾಗಿಯಾದರೆ ಅವರಿಗೆ ಪಾಪಕ್ಕಾದ ಧಂಡನೆಯು "ಸತ್ತೇ ಸಾಯುವಿ" ಎಂದೇ ಆಗುತ್ತಿತ್ತು.

ಮೂರುವರೆ ವರ್ಷದ ಅವರ ಜೀವನ ದೇವನಿಗಾಗಿಯೂ ದೇವರ ಚಿತ್ತವನ್ನು ನೆರವೇರಿಸುವುದಕ್ಕಾಗಿಯೂ ಅರ್ಪಣಿಸಲಾಗಿತ್ತು. ಅವರು ದೇವರ ಚಿತ್ತವನ್ನು ಪರಲೋಕ ತಂದೆಗೆ ಇಷ್ಟವಾಗುವ ರೀತಿಯಲ್ಲಿ ಪರಿಪೂರ್ಣವಾಗಿ ಮಾಡಿದ್ದಾರ? ಎಂಬುವುದೇ ಪ್ರಶ್ನೆಯಾಗಿತ್ತು. ಇದರೊಂದಿಗೆ ಕೂಡ ಇನ್ನೂ ಕೆಲವು ಗಂಟೆಯ ಸಮಯದಲ್ಲಿ ಬರುವ ಅನುಭವಗಳ ನಿಮಿತ್ತ ತಮ್ಮ ಸರಿಯಾದ ಧೈರ್ಯದಿಂದಲೂ, ಸರಿಯಾದ ವಿಶ್ವಾಸದಿಂದಲೂ, ಸರಿಯಾದ ವಿಧೇಯತೆಯಿಂದಲೂ ನಡೆದುಕೊಳ್ಳಲು ಸಾಧ್ಯವೇ? ನಡೆದುಕೊಳ್ಳುವೆನೋ ಅಥವಾ ಎಡವಿಬಿದ್ದು ತನ್ನೆಲ್ಲವನ್ನೂ ಮರಣದಲ್ಲಿ ಕಳೆದುಕೊಳ್ಳುವೆನೋ? ಎಂಬ ಪ್ರಶ್ನೆಯೇ ಅವರೊಳಗೆ ತುಂಬಿಕೊಂಡಿತು.

## ಬೋಧಕರ ಪರವಾಗಿ ಮಾತನಾಡುವವರು ಯಾರು ಇಲ್ಲ

ಹೀಗೆ ಅವರ ಹೆಜ್ಜೆಯನ್ನು ಹಿಂಬಾಲಿಸಿ ನಡೆಯಲು ಬಯಸುವ ನಮಗಿಂತ ಬೋಧಕರ ವಿಷಯ ಎಷ್ಟೋ ಬದಲಾಗಿತ್ತು ಎಂದು ನಾವು ನೋಡುತ್ತೇವೆ. ನಾವು ಕಳೆದುಕೊಳ್ಳತಕ್ಕದ್ದು ಯಾವುದೂ ಇಲ್ಲ ಏಕೆಂದರೆ ನಮ್ಮ ಸಂತತಿಯವರೆಲ್ಲರೂ ಮರಣಧಂಡನೆಯ ಕೆಳಗೆ ಕಾಣಲ್ಪಡುತ್ತಾರೆ. ಈಗಲೂ ಯೇಸುವಿನ ಹಿಂಬಾಲಕರು ತಮ್ಮ ಪಾಪಗಳಿಗಾಗಿ ಮರಣವನ್ನು ಅನುಭವಿಸಿದ ದೇವಕುಮಾರನು ಅವರೇ ಎಂದು, ಅವರ ಪುಣ್ಯವು ನಮ್ಮ ಅಪರಿಪೂರ್ಣತೆಗಳಿಂದಾದ ಕೊರತೆಯನ್ನು ಸರಿಪಡಿಸುತ್ತದೆ. ಏಕೆಂದರೆ ನಾವು ಅವರಲ್ಲಿ ನೆಲೆನಿಂತು ತಂದೆಯ ಚಿತ್ತವನ್ನು ನೆರವೇರಿಸಲು ಬಯಸುವವರಾಗಿದ್ದೇವೆ ಎಂದು ಅರಿತುಕೊಳ್ಳುತ್ತಾರೆ.

ಆದರೆ ಒಂದುವೇಳೆ ಬೋಧಕರು ತಪ್ಪಿಹೋಗುವವರಾಗಿದ್ದರೆ ಅವರ ಕೊರತೆಗಳನ್ನು ಸರಿಪಡಿಸುವುದಕ್ಕೆ ಅವರಿಗೆ ಯಾರು ಇಲ್ಲ. ಅವರು ತಪ್ಪುಮಾಡುವುದು ನಿತ್ಯವಾದ ಮರಣವನ್ನು ಸೂಚಿಸುವದಾಗಿದೆ. ಇನ್ನೂ ವಿಶೇಷವಾದ ಸತ್ಯಕ್ಕಾಗಿ ದೇವರಿಂದ ಪ್ರಮಾಣಮಾಡಲ್ಪಟ್ಟ ಆ ವಿಶೇಷವಾದ ಆಶೀರ್ವಾದಗಳೆಲ್ಲವನ್ನೂ ಕಳೆದುಕೊಳ್ಳುವುದನ್ನು ಸೂಚಿಸುವುದಾಗಿರುತ್ತದೆ. ಅಭಿಷಕ್ತನ ರಾಜ್ಯದ ಮೂಲಕವಾಗಿ ಮನುಕುಲವನ್ನು ಪಾಪ ಮತ್ತು ಮರಣದ ಸ್ಥಿತಿಯಿಂದ ಮೇಲಕ್ಕೆತ್ತುವ ತಂದೆಯ ಕಾರ್ಯವನ್ನು ಅರಿತುಕೊಳ್ಳುವ ಮಹಾ ಹಕ್ಕುಗಳನ್ನು ಕೂಡ ಕಳೆದುಕೊಳ್ಳುವದನ್ನು ಕುರಿತದ್ದಾಗಿದೆ. ಸರಳವಾಗಿ ಹೇಳಬೇಕೆಂದರೆ ಬೋಧಕರ

ನಿತ್ಯವಾದ ಜೀವವು ದೂತರಿಗೂ ದೊರೆತನಗಳಿಗೂ ಅಧಿಕಾರಗಳಿಗೂ ಮೇಲಾಗಿ ತಂದೆಯ ಬಲಪಾರ್ಶ್ವದಲ್ಲಿ ಉನ್ನತದಲ್ಲಿ ಅವರು ಏರಲ್ಪಡುವುದೂ ನಿರ್ಲಯವಸ್ಥೆ ಘನಮಹಿಮೆಯೂ ಅವರಿಗಿರುವ ಸಮಸ್ತವೂ ಆ ರಾತ್ರಿಯಲ್ಲಿ ಗೆತ್ಸೇಮನೆಯ ತಕ್ಕಡಿಯಲ್ಲಿ ಕಾಣಲ್ಪಟ್ಟಿತು.

ಇವೆಲ್ಲವುಗಳನ್ನೂ ಬೋಧಕರು ಅರಿತುಕೊಂಡಾಗ ಅವರು ಈ ಯೋಚನೆಗಳಲ್ಲೇ ಕುಗ್ಗಿಹೋದರು ಎಂಬುದಕ್ಕೆ ಆಶ್ಚರ್ಯಪಡಬೇಕಾಗಿಲ್ಲ. ತಮ್ಮ ಮುಂದೆ ಸಂಭವಿಸಲಿರುವ ವಿಶೇಷ ಉಪದ್ರವಗಳಿಂದ ಭಯಂಕರವಾದ ಅನುಭವಗಳುಳ್ಳ ವೇಳೆಯೊಳಗಿಂದ ತಾವು ತಪ್ಪಿಸಿಕೊಳ್ಳುವಂತೆಯೂ ಕಟಾಕ್ಷಿಸಪಡುವಂತೆಯೂ ಧೈವೀಕ ಯೋಜನೆಯು ಬೇರೆ ರೀತಿಯಲ್ಲಿ ನಡೆಯಲು ಸಾಧ್ಯವಿದೆಯೇ ಎಂದು ಅವರು ಬಯಸಿದರೂ ಆಶ್ಚರ್ಯಪಡಬೇಕಾಗಿಲ್ಲ! ಆ ಅನುಭವಗಳ ಭಯಂಕರವಾದ ಭಾಗವು ಅವರು ದೇವದೂಷಣೆ ಮಾಡಿದವರಾಗಿಯೂ, ದೇವರ ನೀತಿಗೆ ಶತ್ರುವಾಗಿಯೂ ತಪ್ಪಿತಸ್ಥನಾಗಿಯೂ ಎಣಿಸಲ್ಪಡಬೇಕಾಯಿತು.

## ನಮ್ಮ ಕರ್ತರು ಏಕೆ ಹೆದರಿದರು?

ಈ ಕಾರ್ಯಗಳು ಭ್ರಷ್ಟನಾದ, ನೀತಿಭ್ರಷ್ಟನಾದ ಆತ್ಮಕ್ಕೆ ದೊಡ್ಡದಾಗಿ ಕಾಣದಿದ್ದರೂ ತಂದೆಗೆ ಪ್ರೀತಿಯಿಂದಲೂ ಸತ್ಯದಿಂದಲೂ ತುಂಬಿದವನಾಗಿ ಕಾಣಲ್ಪಡುವ ಹೃದಯಕ್ಕೋ ಈ ರೀತಿಯ ಅನುಭವವೆಂಬುದು ಭಯಂಕರವಾಗಿ ಕಾಣಲ್ಪಟ್ಟಿರುತ್ತದೆ. ಅಂದರೆ ತಂದೆಯ ಚಿತ್ತವನ್ನು ನೆರವೇರಿಸಲು ತಮಗಿದ್ದ ಎಲ್ಲವನ್ನೂ ತ್ಯಾಗಮಾಡಿದರು. ತಮ್ಮ ಪರಲೋಕ ಮಹಿಮೆಯನ್ನೂ ಭೂಮಿಯ ಆಶೀರ್ವಾದವನ್ನೂ ತ್ಯಾಗಮಾಡಿದವರಾದರು. ಇಂತವರು ದೇವರಿಗೆ ವಿರೋಧವಾಗಿ ದೇವದೂಷಣೆ ಮಾಡಿದವರೆಂದು ಹೇಳಲಾಯಿತು. ಅವರು ದುಷ್ಟನೆಂದು ತಪ್ಪಿತಸ್ಥನೆಂದು ಶಿಲುಬೆಗೇರಿಸಲ್ಪಡುವರು ಅವರಿಗೆ ಭಯಂಕರವಾಗಿಯೇ ಕಾಣಲ್ಪಟ್ಟಿರುತ್ತದೆ!

ಈ ಅವಮಾನವು ತಮ್ಮನ್ನು ಬಿಟ್ಟುಹೋಗಬೇಕೆಂದು ಯೇಸು ಪ್ರಾರ್ಥಿಸಿದರು. ಅವರು ತಾನು ಮರಣವನ್ನು ಅನುಭವಿಸಬಾರದೆಂದು ಪ್ರಾರ್ಥನೆ ಮಾಡಲಿಲ್ಲ. ಏಕೆಂದರೆ ಈ ಕಷ್ಟಗಳಿಗಾಗಿಯೇ ತಾನು ಭೂಮಿಗೆ ಬಂದಿದ್ದೇನೆಂದು ತನ್ನ ಮರಣದ ಮೂಲಕವಾಗಿ ಮಾತ್ರವೇ ಮನುಕುಲದ ಮೇಲಿರುವ ಮರಣಧಂಡನೆಯನ್ನು ಮಾರ್ಪಡಿಸಲು ಸಾಧ್ಯವೆಂದು ತಿಳಿದುಕೊಂಡಿದ್ದರು. ಅವರು ತಮ್ಮ ಮರಣವನ್ನು ಕುರಿತು ಆಗಾಗ್ಗೆ ಮಾತನಾಡಿಕೊಳ್ಳುತ್ತಿದ್ದರು. ಮರಣದಿಂದ ತಪ್ಪಿಸಿಕೊಳ್ಳಬೇಕೆಂದು ಅವರು ಒಂದುಬಾರಿಯೂ ಸಹ ಎಣಿಸಲಿಲ್ಲ. ಮಾಂಸವೂ ರಕ್ತವೂ ದೇವರ ರಾಜ್ಯದಲ್ಲಿ ಪ್ರವೇಶಿಸುವುದಿಲ್ಲ ಎಂಬುದನ್ನು ಅವರು ಚೆನ್ನಾಗಿ ತಿಳಿದುಕೊಂಡಿದ್ದರು. ಆ ಸಮಯದ ವಿಶೇಷವನ್ನೂ ಅವಮಾನವನ್ನೂ ಮಾರ್ಪಡಿಸಲು ತಂದೆಯ ಬಳಿ ಬೇರೆ ಯಾವುದಾದರು ದಾರಿ ಇರುತ್ತದೆಯೋ ಎಂದೇ ಅವರು ಎದುರುನೋಡುತ್ತಿದ್ದರು. ಆದರೂ ಬೋಧಕರು ತಮಗಾಗುವ ಅತ್ಯಂತ ಕಷ್ಟವಾದ ವೇಳೆಯಲ್ಲಿ ಕೂಡ ಇದು ನನ್ನ ಚಿತ್ತವಲ್ಲ, ನಿನ್ನ ಚಿತ್ತದಂತೆಯೇ ಆಗಲಿ ಎಂದು ಪ್ರಾರ್ಥನೆ ಮಾಡಿದರು. ಬೋಧಕರ ಗೆತ್ಸೇಮನೆ ಅನುಭವಗಳು ಕಳವಳಗಳೊಂದಿಗೆ ಕಾಣಲ್ಪಟ್ಟಿತು ಪರಿಶುದ್ಧ ಪೌಲನು ನಮಗೆ ನಿಶ್ಚಯ ಪಡಿಸಿದ್ದಾರೆ. ಇದು ಪ್ರಾಣವನ್ನು ಕಳೆದುಕೊಳ್ಳುವೆನು ಎಂಬ ಭಯವಾಗಿರದೆ ಬದಲಾಗಿ ಮರಣದಲ್ಲಿಯೇ ಎಂದೆಂದೂ ಕಾಣಲ್ಪಡುವುದು ಎನ್ನುವುದನ್ನು ಕುರಿತ ಭಯವಾಗಿತ್ತು. ಮತ್ತು ಸಂಪೂರ್ಣ ವಿಧೇಯತೆ ಎಂಬ ಶರತ್ತಿನ ಮೇಲೆ ತಂದೆಯಿಂದ ಪ್ರಮಾಣಮಾಡಲ್ಪಟ್ಟ ಮಹಿಮೆಯಾದ ಪುನರುತ್ಥಾನಕ್ಕೆ ಪಾತ್ರರಾಗಿ ಎಣಿಸಲ್ಪಡದಂತೆ ಹೋಗುವದನ್ನು ಕುರಿತ ಭಯವಾಗಿತ್ತು. ಅವರು ಮಾಂಸಧಾರಿಯಾದ ದಿನಗಳಲ್ಲಿ ಮರಣದಿಂದ (ಪುನರುತ್ಥಾನದ ಮೂಲಕವಾಗಿ) ರಕ್ಷಿಸಲು ಶಕ್ತರಾಗಿರುವವರನ್ನು ನೋಡಿ, ಶಬ್ಧದಿಂದಲೂ ಕಣ್ಣೀರಿಂದಲೂ ಭಿನ್ನಹಿಸಿ ಪ್ರಾರ್ಥಿಸಿ ತಮಗುಂಟಾದ ಭಯಭಕ್ತಿಯಿಂದ

ಕೇಳಲ್ಪಟ್ಟರು (ಹಿಬ್ರಿ 5:7) ಎಂದು ಪರಿಶುದ್ಧ ಪೌಲನು ತಿಳಿಸುತ್ತಾನೆ. ಅವರು ಮರಣದಿಂದ ರಕ್ಷಿಸಲ್ಪಟ್ಟರು ಮತ್ತು ಇದಕ್ಕಿಂತ ಮೇಲಾಗಿ ಅವರು ಮರಣದಿಂದ (ಪುನರುತ್ಥಾನದ ಮೂಲಕ) ರಕ್ಷಿಸಲ್ಪಡುವರು ಎಂಬ ನಿಶ್ಚಯವು ತಂದೆಯಿಂದ ಅವರಿಗೆ ಕೊಡಲ್ಪಟ್ಟಿತು.

## ಉನ್ನತದಿಂದ ಅವರು ಬಲಪಡಿಸಲ್ಪಟ್ಟರು

ಇದುವೇ ದೇವರಿಂದ ಒಬ್ಬ ದೇವದೂತನು ಅವರಿಗಾಗಿ ತೋಟದಲ್ಲಿ ಪ್ರತ್ಯಕ್ಷನಾಗಿ ಅವರನ್ನು ಬಲಪಡಿಸಿದರು ಎಂಬ ವಾಕ್ಯಗಳ ವಿವರಣೆಯಾಗಿದೆ. ಯೇಸು ಆ ನಿಮಿಷದವರೆಗೂ ಪ್ರಾಮಾಣಿಕರಾಗಿ ಇದ್ದರು ಎಂದೂ ಶೀಘ್ರದಲ್ಲಿ ಬರಲಿರುವ ಶೋಧನೆಯ ವೇಳೆಯಲ್ಲಿ ಧೈವೀಕ ಅಶೀರ್ವಾದವಾದದ್ದು ಅವರಲ್ಲಿ ಕಾಣುವುದು ಎಂದೂ ತಂದೆಯಬಳಿ ಇರುವ ವಾಗ್ದಾನವನ್ನು ದೂತನು ಯೇಸುವಿಗೆ ಕೊಟ್ಟರು. ಆ ಕ್ಷಣಮೊದಲುಗೊಂಡು ಅನೇಕ ಭಯಗಳೂ ಕಷ್ಟಗಳೂ ದೂರವಾಯಿತು. ತಂದೆ ಇದುವರೆಗೂ ಅಂಗೀಕರಿಸಿದ್ದಾರೆಂದರೆ ಮತ್ತು ತಂದೆಯ ಆಶೀರ್ವಾದವು ಸಂತೋಷವೂ ತಮ್ಮಜೊತೆಗೆ ಬಂದರೆ, ಏನೇ ಬಂದರೂ ಅವರಿಂದ ಎಲ್ಲವನ್ನೂ ಎದುರಿಸಲು ಸಾಧ್ಯ. ಆ ರಾತ್ರಿ ವೇಳೆಯಲ್ಲೂ ಹಿಂಬಾಲಿಸಿ ಬಂದ ದಿನಗಳಲ್ಲೂ ತುಂಬಾ ಕಠಿಣವಾದ ಸಂದರ್ಭಗಳ ನಡುವೆ ಯೇಸು ಸಮಾಧಾನದಲ್ಲೂ ಸಮಾಧಾನರಾಗಿ ಕಾಣಲ್ಪಟ್ಟರು. ತಮಗಾಗಿ ಕಣ್ಣೀರಿಡುವವರನ್ನು ಯೇಸು ಸಮಾಧಾನಪಡಿಸಿದರು. ತಮ್ಮ ತಾಯಿಯನ್ನು ವಿಧೇಯರಾದ ಪರಿಶುದ್ಧ ಯೋವಾನ್ನನ ಬಳಿ ಒಪ್ಪಿಸಿದರು.

ಬೋಧಕರ ಈ ಅನುಭವಗಳಲ್ಲಿ ಅವರ ಶಿಷ್ಯರ ಅನುಭವಗಳನ್ನು ಗುರುತಿಸಬಹುದು. ಅವರ ಪಾಪಗಳು ಕ್ಷಮಿಸಲ್ಪಟ್ಟವು ಎಂದು ತಂದೆ ಅವರನ್ನು ಪ್ರೀತಿಸುತ್ತಾರೆಂದು ಅವರ ಕೃಪೆ ಅವರಿಗೆ ಸಾಕಾಗಿದೆ ಎಂದೂ ಅವರಿಗೆ ನಿಶ್ಚಯಪಡಿಸಲು ಅವರು ಮರಣವನ್ನು ಕಂಡು ಹೆದರಿದರೂ ಈ ರೀತಿಯಾದ ಸಂದರ್ಭಗಳಲ್ಲಿ ಅವರು ಧೈರ್ಯದಿಂದ ಕಾಣಲು ಸಾಧ್ಯ.

ಬೋಧಕರಿಗೂ ಅವರ ಹಿಂಬಾಲಕರಿಗೂ ನಡುವಿನ ಅತಿದೊಡ್ಡ ವ್ಯತ್ಯಾಸವನ್ನು ನೆನಪಿಗೆ ತಂದುಕೊಳ್ಳಬೇಕು. ಅದೇನೆಂದರೆ ಜನರಲ್ಲಿ ಒಬ್ಬನೂ ಅವರೊಂದಿಗೆ ಇರಲಿಲ್ಲ ಎಂಬ ಬೋಧಕರ ವಿಷಯಕ್ಕಿಂತ ನಮ್ಮ ವಿಷಯ ವ್ಯತ್ಯಾಸವಾಗಿ ಕಾಣಪ್ಪಡುತ್ತದೆ. ಬೋಧಕರು ನಮ್ಮೊಂದಿಗೆ ಕಾಣಲ್ಪಡುತ್ತಾರೆ. ನಾನು ನಿನ್ನನ್ನು ಬಿಟ್ಟು ಹೋಗುವದೂ ಇಲ್ಲ, ನಿನ್ನನ್ನು ಕೈಬಿಡುವದೂ ಇಲ್ಲ ಎಂದು ಬೋಧಕರು ನುಡಿಯುತ್ತಾರೆ. ಇದರೊಂದಿಗೆ ಕೂಡ ಕ್ರಿಸ್ತನ ಸಹೋದರರ ನಡುವೆ ಆತ್ಮದ ಐಕ್ಯವನ್ನು ನಾವು ಪಡೆದುಕೊಂಡಿದ್ದೇವೆ. ನಮ್ಮೊಂದಿದೆ ಎಚ್ಚರವಾಗಿದ್ದು ನಮ್ಮೊಂದಿಗೆ ಕೂಡ ಪ್ರಾರ್ಥನೆಮಾಡುವವರಿಗಾಗಿ ಸಹೋದರರನ್ನು ಉತ್ಸಾಹಪಡಿಸುವ ವಾಕ್ಯಗಳಾದ ಒಂದೊಂದು ಶೋಧನೆಯಾದ ವೇಳೆಯಲ್ಲೂ ಬಲಪಡಿಸುವಂತೆ ಇರುತ್ತದೆ. ಧೈವೀಕ ಏರ್ಪಾಡುಗಳು ಮತ್ತು ಸರಿಯಾದ ಎಲ್ಲಕ್ಕೂ ನಾವು ಅವರಿಗೆ ಕೃತಘ್ನತೆ ಸಲ್ಲಿಸಿಕೊಂಡು ದೇವರು ತಮ್ಮ ಕುಮಾರನ ನಿಮಿತ್ತವಾಗಿ ಕೊಡುವುದಕ್ಕಾಗಿಯೇ ಬಲದೊಳಗಿನ ಬಲದಿಂದ ನಮ್ಮ ಗೆತ್ಸೇಮನೆಯೊಳಗೆ ಹಾದುಹೋಗುವವರಾಗೋಣ.